**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಃ ಬೇಲೂರು**

**ಃಸಿಸಿ ಸಂಖ್ಯೆಃ 299 ಃ 2021 ಃ**

**ಫಿರ್ಯಾದುದಾರರು** ಃ **ಸರ್ಕಾರದ ಪರವಾಗಿ**
**ಅಬಕಾರಿ ಪೊಲೀಸ್, ಬೇಲೂರು**

**ವಿರುದ್ಧ**

**ಆರೋಪಿಃಗಳು**

1. ನಾಗೇಶ ಬಿನ್ ಲೇಟ್ ಈರಯ್ಯ,
   48 ವರ್ಷ,

2. ರುದ್ರಯ್ಯ ಬಿನ್ ಲೇಟ್ ಉದ್ದಯ್ಯ,
   60 ವರ್ಷ,
   ಇಬ್ಬರು ಆರೋಪಿತರ ವಾಸಃ
   ಚುಂಗನಹಳ್ಳಿ ಗ್ರಾಮ, ಅರೇಹಳ್ಳಿ ಹೋಬಳಿ,
   ಬೇಲೂರು ತಾಲ್ಲೂಕು.

\- - -

**ಃದೋಷಾರೋಪಣೆಃ**

ಶ್ರೀ ನಾಗೇಂದ್ರ **ಬಿ.ಎ., ಎಲ್ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಬೇಲೂರು ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆಃ-**

**1) ದಿನಾಂಕಃ 15.12.2020 ರಂದು** ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ, ಚುಂಗನಹಳ್ಳಿ ಗ್ರಾಮಕ್ಕೆ ಹೋಗುವ ತಿರುವು ರಸ್ತೆ ಬಳಿ ಚುಂಗನಹಳ್ಳಿ ಗ್ರಾಮದ ಕಡೆಯಿಂದ ಆರೋಪಿತರಾದ ನೀವುಗಳು ನಿಮ್ಮ ಬಾಬ್ತು ಬಜಾಜ್ ಪ್ಲಾಟಿನ ಈಎಸ್ **100** ನೋಂದಣಿ ಸಂಖ್ಯೆ ಕೆಎ**-46-**ಕೆ**-7633** ಎಂಬ ದ್ವಿ ಚಕ್ರ ವಾಹನದ ಹಿಂಭಾಗದಲ್ಲಿನ ಸೈಡ್ ಬ್ಯಾಗ್ ನಲ್ಲಿ **4** ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು **ಕಾನೂನು ಬಾಹಿರವಾಗಿ ಯಾವುದೇ ಪರವಾನಗಿ ಇಲ್ಲದೇ, ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು, ಕರ್ನಾಟಕ** ಅಬಕಾರಿ **ಕಾಯ್ದೆ ಕಲಂ.11, 13(1)**(ಎ) ಸಹವಾಚಕ ಕಲಂ**.32(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ** ಎಸಗಿರುತ್ತೀರಿ**?**

**2) ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ** ನೀವುಗಳು **ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡುವ ಸಲುವಾಗಿ 4** ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಸ್ವಾಧೀನ ಹೊಂದಲು ನಿಮಗೆ ಸೇರಿದ ದ್ವಿಚಕ್ರ ವಾಹನವನ್ನು **ಅನುವು ಮಾಡಿಕೊಂಡಿದ್ದು,**

ಅದರನ್ವಯ ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 38(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?

3) ಮೂರನೇಯದಾಗಿ, ಮೇಲ್ಕಂಡ ಅದೇ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ನಿಮಗೆ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಮಾನವ ಜೀವಕ್ಕೆ ಹಾನಿಕರವಾದ ಕಲಬೆರಿಕೆ ಪಾನೀಯವಾದ 4 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಸ್ವಾಧೀನ ಹೊಂದಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂಃ 272 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?

ಮೇಲ್ಕಂಡ ಆರೋಪಿತರಿಗೆ ದೋಷಾರೋಪಣೆಯ ಸಾರಾಂಶವನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 10-01-2025

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು

**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಃ ಬೇಲೂರು**

**ಃಸಿಸಿ ಸಂಖ್ಯೆಃ 299 ಃ 2021 ಃ**

1ನೇ ಆರೋಪಿಯ ಹೆಸರು ಃ ನಾಗೇಶ
ತಂದೆ:**ಗಂಡನ ಹೆಸರು** ಃ ಬಿನ್ ಲೇಟ್ ಈರಯ್ಯ,
**ವಯ್ಯಸ್ಸು** ಃ **48** ವರ್ಷ,
**ವಾಸ ಸ್ಥಳ** ಃ ಚುಂಗನಹಳ್ಳಿ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು.

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ**?**
ಉತ್ತರಃ

ಪ್ರಶ್ನೆಃ2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ**?** ಅಥವಾ ವಿಚಾರಣೆಯಾಗಬೇಕೋ**?**
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ದೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 10-01-**2025**

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು

**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಃ ಬೇಲೂರು**

**ಃಸಿಸಿ ಸಂಖ್ಯೆಃ 299 ಃ 2021 ಃ**

2ನೇ ಆರೋಪಿಯ ಹೆಸರು ಃ ರುದ್ರಯ್ಯ
ತಂದೆ:**ಗಂಡನ ಹೆಸರು** ಃ ಬಿನ್ ಲೇಟ್ ಉದ್ದಯ್ಯ
**ವಯ್ಯಸ್ಸು** ಃ **60** ವರ್ಷ,
**ವಾಸ ಸ್ಥಳ** ಃ ಚುಂಗನಹಳ್ಳಿ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು.

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ**?**
ಉತ್ತರಃ

ಪ್ರಶ್ನೆಃ2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ**?** ಅಥವಾ ವಿಚಾರಣೆಯಾಗಬೇಕೋ**?**
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ದೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 10-01-**2025**

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು